

# ಟೆಗೆರೆನ್ಸಿ

## ಆಲ್ಪ್ಸ್ ಪರ್ವತಗಳ ಕನ್ನಡಿ

ಜರ್ಮನಿಯ 'ಟೆಗೆರೆನ್ಸಿ ಲೇಕ್' ಪ್ರವಾಸಿಗರ ಪಾಲಿಗೆ ಮೋಹನ ಮುರಲಿಯಂತಹದ್ದು. ಆಲ್ಪ್ಸ್ ಪರ್ವತಗಳಿಗೆ ಕನ್ನಡಿ ಹಿಡಿದಂತೆ ಕಾಣಿಸುವ ಈ ಸರೋವರ, ತನ್ನ ಅನುಪಮ ಸೌಂದರ್ಯದಿಂದ ನೋಡುಗರನ್ನು ಪರವಶಗೊಳಿಸುತ್ತದೆ.

■ ಎಸ್.ಪಿ. ವಿಜಯಲಕ್ಷ್ಮಿ

ಮ್ಯೂನಿಕ್‌ನಿಂದ 'ಲೆಂಗ್ರಿಸ್' ಪರ್ವತಶ್ರೇಣಿಯ ಧವಳವೈಭವವನ್ನು ನೋಡಬೇಕೆಂಬ ಅದಮ್ಯ ಉತ್ಸಾಹದಲ್ಲಿ ಬೆಳ್ಳಂಬೆಳಿಗ್ಗೆ ಕೊರೆವ ಚಳಿ, ಸುರಿವ ಹಿಮದಲ್ಲಿ ಅಡಿಮುಡಿ ಗಗನಯಾತ್ರಿಗಳಂತೆ ರಾಶಿ ಬಟ್ಟೆ ಮೈಮೇಲೆ ಹೊತ್ತು ಹೊರಟೆವು. "ಎಷ್ಟು ಹೊತ್ತಾದ್ರೂ ಚಿಂತೆಯಿಲ್ಲ, 'ಟೆಗೆರೆನ್ಸಿ (ಟೆಗೆರೆನ್ಷಿ) ಲೇಕ್' ನೋಡದೆ ಬರಬೇಡಿ" ಎಂದು ಅಳಿಯ ಹೇಳಿದಾಗ ನನ್ನ ಸಂಭ್ರಮ ಮತ್ತಷ್ಟು ಹೆಚ್ಚಿತ್ತು. ನನಗೋ ಈ ಹಿಮ, ಸರೋವರ, ನದಿ, ಕಾಡು ಅಂದರೆ ಹುಚ್ಚು ಪ್ರೀತಿ. ಅದರಲ್ಲೂ ಜರ್ಮನಿಯ ಬವೇರಿಯನ್ ರಾಜ್ಯದ ಹಳ್ಳಿಗಳ ಸೌಂದರ್ಯವಂತೂ ನಿಜಕ್ಕೂ ಹುಚ್ಚು ಹಿಡಿಸುವಂಥದ್ದೇ.

ಬವೇರಿಯನ್ ಟಿಪಿಕಲ್ ಶೈಲಿಯ ಪುಟ್ಟಪುಟ್ಟ ಮರದ ಮನೆಗಳು, ಗೋಥಿಕ್ ಶೈಲಿಯ ಚರ್ಚು, ಆಲ್ಪ್ಸ್ ಪರ್ವತಾವಳಿ, ಹಿಮ, ಇಳಿಜಾರಿನ ಹುಲ್ಲುಗಾವಲು, ಮೇಯುವ ಬೆಳ್ಳನೆಯ ದಷ್ಟಪುಷ್ಟ ಹಸುಕುರಿಗಳು – ಓಹ್, ನೋಡಿಯೇ ಸವಿಯಬೇಕು ಆ ಮಾದರಿಯ ರಮ್ಯತೆ.

ಲೆಂಗ್ರಿಸ್‌ಗೆ ಹೋದರೆ ಅಕ್ಷರಶಃ ನಡುಗಿಸಿಬಿಟ್ಟಿತು ಹಿಮವರ್ಷ. ಗಂಟೆಕಾಲ ಗಡಗುಟ್ಟಿಸಿದ ಮೇಲೆಯೇ ಸೂರ್ಯ ಕಾಣಿಸಿದ್ದು. ಲೆಂಗ್ರಿಸ್ ಹಿಮಲೋಕವನ್ನು ಮನಸಾರೆ ಸವಿದಿದ್ದಾಯ್ತು. ಮಧ್ಯಾಹ್ನದ ಹೊತ್ತಿಗೆ ಮೂರ್ನಾಲ್ಕು ಅಡಿ ಹಿಮದಿಂದ ತುಂಬಿದ ನೆಲದಲ್ಲಿ ಓಡಾಡಿ, ಚರ್ಮದ ಶೂ ಒಳಗೂ ಸದ್ದಿಲ್ಲದೆ ಸೋರಿದ ಹಿಮದ ಕೊರೆವ ನೀರು ದಪ್ಪದ ಸಾಕ್ಸ್ ಕೂಡ ಒದ್ದೆಯಾಗಿಸಿ ಕಾಲ್ಬೆರಳುಗಳ ಜೊತೆ ಕ್ರೌರ್ಯ ತೋರಿಸತೊಡಗಿತು. ಸೂರ್ಯನ ಬಿಸಿಲಿದ್ದರೂ ತಟ್ಟದ ಶಾಖಕ್ಕೆ ಬೆರಳಿನಲ್ಲಿ ಹಿಮಕೊರೆತದ ಸಿಡಿತದನುಭವ ಮೊದಲಬಾರಿಗೆ!

ಬಸ್ ಬಂದಾಗ ಜೀವ ಬಂದಂತೆ ಹತ್ತಿ,



ಕನ್ನಡಿಯಂಥ ಸರೋವರ